ದಿನಾಂಕ 29-05-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಾದಿಗಳ ಪರ ಶ್ರೀ ಆರ್.ಎಸ್.ಟಿ ವಕೀಲರಿಂದ:**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳು ಸತ್ಯದಿಂದ ಕೂಡಿದ್ದು, ಪ್ರಮಾಣ ಪತ್ರದಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಆಸ್ತಿ ಸಂ: 45/ಎ ರ ಕರ ನಿರ್ಧರಣಾ ಪಟ್ಟಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-1 ಎಂದು, ಆಸ್ತಿ ಸಂ: 45/ಎ 1 ರ ಕರ ನಿರ್ಧರಣಾ ಪಟ್ಟಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-2 ಎಂದು, ಒಂದು ಛಾಯಾ ಚಿತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-3 ಎಂದು, ಸ್ಟುಡಿಯೋ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-4 ಎಂದು, 3-ಕಚ್ಚಾ ನಕಾಶೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-5 ರಿಂದ 7 ಎಂದು, 4- ಛಾಯಾ ಚಿತ್ರಗಳು ಮತ್ತು ಅವುಗಳಿಗೆ ಸಂಬಂಧಿಸಿದೆ ಎಂದು ಹೇಳುವ ಒಂದು ಸಿ.ಡಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-8 ರಿಂದ 12 ಎಂದು ಗುರುತಿಸಲಾಯಿತು. ಮತ್ತೊಂದು ಸಿ.ಡಿಯನ್ನು ಹಾಜರುಪಡಿಸಿದ್ದು ಅದು ಮುರಿದು ಹೋದ ಕಾರಣಕ್ಕೆ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ